**ದಿನಾಂಕ 20.09.2025 ರ ಶನಿವಾರದಂದು ಅಪರಾಹ್ನ 12.00 ಗಂಟೆಗೆ ಅಧ್ಯಕ್ಷರು, ಜಿಲ್ಲಾ ಪ್ರಾಣಿದಯಾ ಸಂಘ, ಉಡುಪಿ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ ರವರ ಅಧ್ಯಕ್ಷತೆಯಲ್ಲಿ ನಡೆದ ಉಡುಪಿ ಜಿಲ್ಲಾ ಪ್ರಾಣಿದಯಾ ಸಂಘದ ಕಾರ್ಯಕಾರಿ ಸಮಿತಿ ಸಭೆಯ ನಡವಳಿಗಳು;**

**ಹಾಜರಾತಿ; ಹಾಜರಾತಿ ವಹಿಯಲ್ಲಿ ಸಹಿಮಾಡಿದಂತೆ.**

ಸಭೆಯ ಆರಂಭದಲ್ಲಿ ಸದಸ್ಯ ಕಾರ್ಯದರ್ಶಿಗಳು, SPCA, ಉಡುಪಿ ಹಾಗೂ ಉಪ ನಿರ್ದೇಶಕರು (ಆಡಳಿತ), ಪಶು ಪಾಲನಾ ಇಲಾಖೆ, ಉಡುಪಿ ಇವರು ಸಭಾಧ್ಯಕ್ಷರಾದ ಜಿಲ್ಲಾಧಿಕಾರಿಗಳನ್ನು ಮತ್ತು ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಹಾಗೂ SPCA ಸದಸ್ಯರನ್ನು ಸಭೆಯಲ್ಲಿ ಸ್ವಾಗತಿಸುತ್ತಾ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಜಿಲ್ಲಾಧಿಕಾರಿಗಳನ್ನು ಕೋರಿದರು.

ಸದಸ್ಯ ಕಾರ್ಯದರ್ಶಿಗಳು, SPCA, ಉಡುಪಿ ರವರು ಸಭೆಯಲ್ಲಿ ಹಾಜರಿದ್ದ PETA, INDIA ಸಂಸ್ಥೆಯ ಪ್ರತಿನಿಧಿಗಳು ಮಾನ್ಯ ಸಭಾಧ್ಯಕ್ಷರ ಗಮನಕ್ಕೆ ಕೆಲವು ವಿಚಾರಗಳ ಕುರಿತು ಅರಿಕೆ ಮಾಡಲು ಅನುಮತಿ ನೀಡುವಂತೆ ಕೋರಿದಾಗ ಸಭಾಧ್ಯಕ್ಷರು ಒಪ್ಪಿದರು.

1. ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲ್ಲೂಕಿನ ಸಾಲಿಗ್ರಾಮದಲ್ಲಿ ಶ್ರೀ ಬಿ.ಸುಧೀಂದ್ರ ಐತಾಳ್ ರವರು ಅನಧೀಕೃತವಾಗಿ ನಡೆಸುತ್ತಿದ್ದ ಪ್ರಾಣಿಗಳ ಪಾರುಗಾಣಿಕಾ ಕೇಂದ್ರದಲ್ಲಿದ್ದ ಪಕ್ಷಿಗಳನ್ನು ಪಿಲಿಕುಳ ಜೈವಿಕ ಉದ್ಯಾನವನ, ಮಂಗಳೂರು ಹಾಗೂ ನಾಯಿ, ನಾಯಿಮರಿ ಮತ್ತು ಬೆಕ್ಕುಗಳನ್ನು PETA, INDIA ಸಂಸ್ಥೆಯ ಪುನವರ್ಸತಿ ಕೇಂದ್ರಕ್ಕೆ ಫೆಬ್ರುವರಿ 2025 ರಲ್ಲಿ ಹಸ್ತಾಂತರಿಸಿದ್ದು, ಸಂಪೂರ್ಣವಾಗಿ ತೆರವುಗೊಳಿಸಲು ಸೂಚಿಸಲಾಗಿತ್ತು. ಆದರೆ ಪ್ರಸ್ತುತ ಹಿಂಸಾತ್ಮಕ ರೀತಿಯಲ್ಲಿ ಮತ್ತು ಅಶುಚಿತ್ವದಲ್ಲಿ ಪುನ: ನಾಯಿ, ಬೆಕ್ಕುಗಳು ಮತ್ತು ವನ್ಯಜೀವಿಗಳನ್ನು ಸಾಕುತ್ತಿರುವುದಾಗಿ, ಈ ಕೇಂದ್ರವನ್ನು ಸಂಪೂರ್ಣವಾಗಿ ತೆರವುಗೊಳಿಸುವಂತೆ PETA, INDIA ಸಂಸ್ಥೆಯ ಪ್ರತಿನಿಧಿಗಳು ಸಭಾಧ್ಯಕ್ಷರಲ್ಲಿ ಕೋರಿದರು.

   ಸಭಾಧ್ಯಕ್ಷರು ಈ ಕುರಿತು ಸಾಲಿಗ್ರಾಮ ಪಟ್ಟಣಪಂಚಾಯತ್ ಅಧಿಕಾರಿಗಳನ್ನು ಕೇಳಿದಾಗ ಪ್ರಾಣಿ ರಕ್ಷಣಾ ಕೇಂದ್ರವನ್ನು ಮುಚ್ಚಿಸುವ ಸಂಬಂಧ 24 ಗಂಟೆಗಳ ಕಾಲಾವಕಾಶ ನೀಡಿ ನೋಟೀಸ್ ಜಾರಿಮಾಡಿ ಬಂದಿರುವುದಾಗಿ ತಿಳಿಸಿದರು. ನೀಡಿರುವ ಕಾಲಾವಕಾಶ ಪೂರ್ಣಗೊಂಡ ನಂತರ ಸ್ಥಳೀಯ ಪಶುವೈದ್ಯಾಧಿಕಾರಿಗಳು, ಮುಖ್ಯಾಧಿಕಾರಿ, ಪಟ್ಟಣಪಂಚಾಯತ್, ಸಾಲಿಗ್ರಾಮ, ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಿಭಾಗ ಹಾಗೂ ಸ್ಥಳೀಯ ಪೋಲೀಸ್ ಅಧಿಕಾರಿಗಳ ತಂಡದೊಂದಿಗೆ ಅನಧಿಕೃತ ಪ್ರಾಣಿ ರಕ್ಷಣಾ ಕೇಂದ್ರಕ್ಕೆ ಭೇಟಿನೀಡಿ, ಕೇಂದ್ರದಲ್ಲಿರುವ ಪ್ರಾಣಿಗಳನ್ನು ಮಹಜರು ಮಾಡಿ ವರದಿ ಸಲ್ಲಿಸಲು ಸೂಚಿಸಿದರು. ನಿಯಮಗಳನ್ನು ಉಲ್ಲಂಘನೆ ಮಾಡಿ ಆರೈಕೆ ಮಾಡುತ್ತಿರುವ ನಾಯಿಗಳು, ಬೆಕ್ಕುಗಳು ಮತ್ತು ಸಂರಕ್ಷಿತ ವನ್ಯ ಜೀವಿಗಳನ್ನು ಮಾತ್ರ ರಕ್ಷಣಾ ಕೇಂದ್ರಗಳಿಗೆ ಸ್ಥಳಾಂತರಿಸಬೇಕಾಗಿರುತ್ತದೆ ಎಂದು ಸಭಾಧ್ಯಕ್ಷರು ತಿಳಿಸಿದರು.

   ಶ್ರೀ ಸುಧೀಂದ್ರ ಐತಾಳ ರವರ ಪ್ರಾಣಿ ರಕ್ಷಣಾ ಕೇಂದ್ರಕ್ಕೆ ಸಾರ್ವಜನಿಕರು ಯಾವುದೇ ಪ್ರಾಣಿಗಳನ್ನು ಬಿಡದಂತೆ / ಕೊಡದಂತೆ ವ್ಯಾಪಕ ಪ್ರಚಾರ ನೀಡುವುದು. ಮತ್ತು ಸಾಲಿಗ್ರಾಮ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಬದಲಿ ಪ್ರಾಣಿ ರಕ್ಷಣಾ ಕೇಂದ್ರವನ್ನು ಸ್ಥಾಪಿಸಲು ಸ್ಥಳವನ್ನು ಗುರುತಿಸಿ NGOಗಳ ಸಹಕಾರದೊಂದಿಗೆ ಅಧಿಕೃತ ಕೇಂದ್ರವನ್ನು ಸ್ಥಾಪಿಸಿ ಸಾರ್ವಜನಿಕರು ಶ್ರೀ ಸುಧೀಂದ್ರ ಐತಾಳರ ಕೇಂದ್ರಕ್ಕೆ ಪ್ರಾಣಿಗಳನ್ನು ನೀಡದಂತೆ ಹಾಜರಿದ್ದ ಸಾಲಿಗ್ರಾಮ ಪಟ್ಟಣ ಪಂಚಾಯತ್ ಅಧಿಕಾರಿಗಳಿಗೆ ಸೂಚಿಸಿದರು.

2. ಬೀದಿ ನಾಯಿಗಳ ಸಂತಾನ ನಿಯಂತ್ರಣ (ABC) ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಸುತ್ತೋಲೆ ಸಂ:ಇ ಪಸಂಮೀ ಕಪ್ರಾಮಂ 2023 ದಿನಾಂಕ 16.03.2023ರಂತೆ ಅನುಸರಿಸಬೇಕಾದ ನಿಯಮಗಳ ಮಾಹಿತಿಯನ್ನು & ABC ಕಾರ್ಯಕ್ರಮವನ್ನು ಸ್ಥಳೀಯ ಸಂಸ್ಥೆಯವರು ನಡೆಸಲು ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಯ ವಿವರವಾಗಿ ಸದಸ್ಯ ಕಾರ್ಯದರ್ಶಿಗಳು ಹಾಗೂ ಉಪ ನಿರ್ದೇಶಕರು ಸಭೆಗೆ ಮಂಡಿಸಿದರು. ಉಡುಪಿ ನಗರಸಭೆಯ ಪೌರಾಯುಕ್ತರು ABC ಕೇಂದ್ರ ನಿರ್ಮಾಣ ಮಾಡಲು ಸ್ಥಳ ಲಭ್ಯವಿಲ್ಲವೆಂದು ತಿಳಿಸಿದರು. ಪ್ರಾಣಿದಯಾ ಸಂಘದ ಸದಸ್ಯರು ಮಲ್ಪೆ ಪಶು ಚಿಕಿತ್ಸಾಲಯದ ಹಿಂಭಾಗದ ಸ್ಥಳವನ್ನು ಪರಿಶೀಲಿಸಬಹುದು ಎಂದು ತಿಳಿಸಿದರು. ಮುಖ್ಯ ಪಶುವೈದ್ಯಾಧಿಕಾರಿ, ಉಡುಪಿ ರವರು ಉಡುಪಿ ನಗರಸಭೆ ವ್ಯಾಪ್ತಿಯ ಬೀಡಿನಗುಡ್ಡೆ ಪ್ರದೇಶದಲ್ಲಿ ನಿರ್ಮಾಣ ಮಾಡಲು ಸೂಕ್ತವಾಗಿದೆ ಎಂದು ತಿಳಿಸಿದರು. ಸಭಾಧ್ಯಕ್ಷರು ಸ್ಥಳ ವೀಕ್ಷಣೆ ಮಾಡಲು ಪೌರಾಯುಕ್ತರಿಗೆ ಸೂಚಿಸಿದರು.

   - ಅವಶ್ಯ ಮೂಲಭೂತ ಸೌಕರ್ಯ, ಶಸ್ತ್ರ ಚಿಕಿತ್ಸಾ ಕೊಠಡಿ, ಕೆನಲ್‌ಗಳು, ಮಾನವ ಸಂಪನ್ಮೂಲ, ಸಾಗಾಣಿಕೆ ವಾಹನ, ಶಸ್ತ್ರ ಚಿಕಿತ್ಸಾ ಪೂರ್ವ ಮತ್ತು ನಂತರದ ಆಹಾರ ವ್ಯವಸ್ಥೆ

ಮಾಡಿಕೊಳ್ಳುವ ಕೇಂದ್ರ ಸ್ಥಾಪನೆ ಅಥವಾ ಪ್ರಾಣಿ ಕಲ್ಯಾಣ ಸಂಸ್ಥೆ ಮುಖಾಂತರ ABC ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬಹುದೆಂದು ತಿಳಿಸಿದಾಗ ನಗರಸಭೆ ಪೌರಾಯುಕ್ತರು 4 ಬಾರಿ ಟೆಂಡರ್ ಕರೆದರೂ ಯಾರೂ ಭಾಗವಹಿಸುತ್ತಿಲ್ಲವಾದ್ದರಿಂದ ಸ್ಥಳೀಯ ಪ್ರಾಣಿ ಕಲ್ಯಾಣ ಸಂಸ್ಥೆ (AWO) ಕ್ಯಾಪ್ಟನ್ ಅನಿಮಲ್ ಕೇರ್ ಟ್ರಸ್ಟ್, ನೋಂದಾಯಿತ ಸಂಸ್ಥೆಯೊಂದಿಗೆ ABC ಕಾರ್ಯಕ್ರಮವನ್ನು ನಡೆಸಿಕೊಡಲು ಚರ್ಚಿಸಲಾಗಿದೆ ಎಂದರು. AWO ಸಂಸ್ಥೆಯವರು ಮಾತನಾಡುತ್ತಾ ಪ್ರತಿ ನಾಯಿಗೆ ನಿಗದಿಪಡಿಸಿರುವ ದರ ರೂ.1650/- ನ್ನು ರೂ.2000/- ಗಳಿಗೆ ಹೆಚ್ಚಿಸಬೇಕೆಂದು ಮಾನ್ಯ ಸಭಾಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು. ಮಾನ್ಯ ಸಭಾಧ್ಯಕ್ಷರು ನಗರಸಭೆ ಪೌರಾಯುಕ್ತರಿಗೆ ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲು ಸೂಚಿಸಿದರು.

- 2023 ನಿಯಮ 3ರ ಪ್ರಕಾರ ಯೋಜನೆ ಮಾನ್ಯತೆ (project Recognition) ಪಡೆಯಬೇಕಾಗಿರುತ್ತದೆ.
- ಬೀದಿನಾಯಿಗಳ ಅನಧಿಕೃತ ನಿರ್ಮೂಲನೆ ಅಥವಾ ಸ್ಥಳಾಂತರಿಸುವ ಪ್ರಯತ್ನಗಳು ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧಗಳಾಗಿವೆ.
- ABC ಶಸ್ತ್ರಚಿಕಿತ್ಸೆ ನಡೆಸಿ ನಾಲ್ಕು ದಿನಗಳ ಚಿಕಿತ್ಸೆ (Post Operative Care) ಹಾಗೂ ಆರೈಕೆಯೊಂದಿಗೆ ARV ಲಸಿಕೆ ನೀಡಿ ಹಿಡಿದು ತಂದ ಪ್ರದೇಶದಲ್ಲಿಯೇ ಬಿಡಬೇಕಾಗಿರುತ್ತದೆ.
- 25 ನಾಯಿಗಳಿಗೆ ಚಿಕಿತ್ಸೆ ಮಾಡುವ ಸಾಮರ್ಥ್ಯ ಒಳಗೊಂಡಂತೆ ಒಂದು ABC ಕೇಂದ್ರ ಕಟ್ಟಡ ನಿರ್ಮಾಣಕ್ಕೆ, ಸಿಬ್ಬಂದಿ, ನೌಕರರ ನಿರ್ವಹಣೆ ಹಾಗೂ ಇತರೆ ವೆಚ್ಚಗಳ ವಿಸ್ತೃತ 2024-25ರ ಅಂದಾಜು ಪಟ್ಟಿಯನ್ನು ಸಭೆಗೆ ಮಂಡಿಸಿದರು.
- ಪ್ರತಿ ಒಂದು ಬೀದಿ ನಾಯಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ತಗಲುವ ವೆಚ್ಚ ಮತ್ತು ಸಂಸ್ಥೆಗಳಿಗೆ ಪಾವತಿಸಬೇಕಾದ ಶುಲ್ಕದ ವಿವರವನ್ನು ಮತ್ತು ABC ಕೇಂದ್ರದ ಪರಿಶೀಲನಾ ಸಮಿತಿಯ ತಾಂತ್ರಿಕ ಸದಸ್ಯರ ವಿವರವನ್ನು ತಿಳಿಸಿದರು.
- ಬೀದಿನಾಯಿಗಳ ಆಕ್ರಮಣ / ದಾಳಿಗೆ ಒಳಪಡುವ ವ್ಯಕ್ತಿಗಳಿಗೆ ನಾಯಿ ಕಡಿತಕ್ಕೆ ರೂ.5000/- ಹಾಗೂ ಮರಣ ಸಂಭವಿಸಿದಲ್ಲಿ ರೂ.5.00 ಲಕ್ಷ ಪರಿಹಾರಧನವನ್ನು ಪರಿಶೀಲನಾ ಸಮಿತಿಯ ಅನುಮೋದನೆಯೊಂದಿಗೆ ನೀಡಬೇಕಾಗುತ್ತದೆ ಎಂದು ತಿಳಿಸಿದರು.
- ಉಡುಪಿ ಜಿಲ್ಲೆಯಲ್ಲಿ 2023-24 ನೇ ಸಾಲಿನಲ್ಲಿ 3454, 2024-25 ರಲ್ಲಿ 1754 ಮತ್ತು 2025-26 (ಆಗಸ್ಟ್-2025 ರವರೆಗೆ) 771 ABC ಕಾರ್ಯಕ್ರಮದ ಪ್ರಗತಿಯಾಗಿರುವುದನ್ನು ತಿಳಿಸಿದರು.
- ಉಡುಪಿ ಜಿಲ್ಲೆಯ ರೇಬೀಸ್ ಲಸಿಕೆ 2023-24 ರಲ್ಲಿ 45176, 2024-25 ರಲ್ಲಿ 77711 & 2025-26 (ಆಗಸ್ಟ್-2025 ರವರೆಗೆ) 6781 ಪ್ರಗತಿಯಾಗಿದ್ದು, ದಿನಾಂಕ 28.09.2025 ರಂದು ವಿಶ್ವ ರೇಬೀಸ್ ದಿನದ ಆಚರಣೆಯೊಂದಿಗೆ ಜಿಲ್ಲೆಯ ಎಲ್ಲಾ ಬೀದಿನಾಯಿ, ಸಾಕುನಾಯಿ ಮತ್ತು ಬೆಕ್ಕುಗಳಿಗೆ ಲಸಿಕಾ ಅಭಿಯಾನ ದಿ.30.10.2025ರ ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು ವ್ಯಾಪಕ ಪ್ರಚಾರ, ಮಾಧ್ಯಮ ಮತ್ತು ಪತ್ರಿಕೆಗಳ ಮೂಲಕ ನೀಡಿ ಶೇ.100 ರಷ್ಟು ಪ್ರಗತಿ ಸಾಧಿಸಲು ಸೂಚಿಸಿದರು.

**ದಿನಾಂಕ 22.08.2025ರ ಮಾನ್ಯ ಸುಪ್ರೀಂ ಕೋರ್ಟ್ ತೀರ್ಪಿನಂತೆ Animal Birth Control (ABC) Rules, 2023 ರನ್ವಯ ನಗರಾಭಿವೃದ್ಧಿ ಇಲಾಖೆ, ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಪಶುಸಂಗೋಪನೆ ಇಲಾಖೆಗಳವರು ಈ ಕೆಳಗಿನ ಸೂಚನೆಗಳ ಅನುಷ್ಠಾನದ ಬಗ್ಗೆ ತಿಳಿಸಲಾಯಿತು.**

- ನಗರಾಭಿವೃದ್ಧಿ ಇಲಾಖೆ ಆಶ್ರಯ ಕೇಂದ್ರಗಳು, ಶಸ್ತ್ರಚಿಕಿತ್ಸಾ ಘಟಕಗಳು, ಕೆನಲ್‌ಗಳು, ದಹನಯಂತ್ರಗಳು, ಸಾಗಾಣಿಕೆ ವಾಹನಗಳು ಸೇರಿದಂತೆ ಅಗತ್ಯ ಮೂಲ ಸೌಕರ್ಯಗಳನ್ನು ಹಾಗೂ ಮಾನವ ಸಂಪನ್ಮೂಲ ಸೃಷ್ಟಿಸಿ / ಬಲಪಡಿಸಲು ಕ್ರಮಕೈಗೊಳ್ಳುವುದು.
- ಪ್ರತಿಯೊಂದು ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಆಹಾರ ವಿತರಣೆ ಕೇಂದ್ರಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸುವುದು, ಇದೇ ರೀತಿ ಪಂಚಾಯತ್ ರಾಜ್ ಸಂಸ್ಥೆಗಳು ಗ್ರಾಮೀಣ ಪಂಚಾಯತ್ ವ್ಯಾಪ್ತಿಯಲ್ಲಿಯೂ ಮೇಲ್ಕಂಡ ಕ್ರಮಗಳನ್ನು ಜಾರಿಗೆ ತರಬೇಕೆಂದರು. ಸಭೆಯಲ್ಲಿ SPCA ಸದಸ್ಯರು ಹಾಗೂ ಪ್ರಾಣಿ ರಕ್ಷಕರು ಗುರುತಿನ ಚೀಟಿಯನ್ನು ನೀಡಲು ಹಾಗೂ ಆಹಾರ ನೀಡುತ್ತಿರುವ ಜಾಗಗಳಲ್ಲಿ ನಾಮಫಲಕಗಳನ್ನು ಅಳವಡಿಸಲು ಕೋರಿದರು. ಮಾನ್ಯ ಸಭಾಧ್ಯಕ್ಷರು ಪೌರಾಯುಕ್ತರಿಗೆ ನಿಯಮಾನುಸಾರ ಕ್ರಮವಹಿಸಲು ಸೂಚಿಸಿದರು.
- ಪಶುಸಂಗೋಪನೆ ಇಲಾಖೆಯ ಸಹಯೋಗದೊಂದಿಗೆ ABC ಶಸ್ತ್ರ ಚಿಕಿತ್ಸೆ ಹಾಗೂ ಲಸಿಕೆ ಕಾರ್ಯಾಚರಣೆಗಳನ್ನು ಕೈಗೊಳ್ಳುವುದು.
- ULBಗಳು ಹಾಗೂ ಪಂಚಾಯತ್‌ಗಳು ಸಂಯುಕ್ತವಾಗಿ ಹೆಲ್ಪ್ ಲೈನ್ ಸ್ಥಾಪಿಸುವುದು.

ಪಿಂಜರಾಪೋಲ್ ಮತ್ತು ಇತರ ಗೋಶಾಲೆಗಳಿಗೆ ಬೆಂಬಲ ನೀಡುವ ಯೋಜನೆಯಡಿಯಲ್ಲಿ2024-25ನೇ ಸಾಲಿನಲ್ಲಿ ರೂ.10.40 ಲಕ್ಷಗಳ ಅನುದಾನ 4 ಗೋಶಾಲೆಗಳಿಗೆ ನೀಡಲಾಗಿತ್ತು. 2025-26 ನೇ ಸಾಲಿಗೆ ಅನುದಾನ ಕೋರಿ 4 ಗೋಶಾಲೆಗಳಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಸದರಿ ಮೊತ್ತ ಜಾನುವಾರು ನಿರ್ವಹಣೆಗೆ ಸಾಕಾಗುತ್ತಿಲ್ಲವೆಂದು ಗೋಶಾಲೆ ಪ್ರತಿನಿಧಿಗಳು ಸಭೆಗೆ ತಿಳಿಸಿದರು. ಸದರಿ ಪ್ರಸ್ತಾವನೆಗಳನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ಸಮಿತಿಯ ಅನುಮತಿ ಕೋರಿ ಮಂಡಿಸಿದರು. ಸಭಾಧ್ಯಕ್ಷರು ಅನುಮೋದಿಸಿದರು.

ಪುಣ್ಯಕೋಟಿ ಸರ್ಕಾರಿ ಗೋಶಾಲೆ ಕೆರೆಬೆಟ್ಟು, ಹೆಬ್ರಿ ತಾ. 2024-25 ನೇ ಸಾಲಿನ ನಿರ್ವಹಣಾ ಖರ್ಚು ವೆಚ್ಚಗಳನ್ನು ಸಭೆಗೆ ಮಂಡಿಸಿದರು. 2025-26ನೇ ಸಾಲಿನ ಜುಲೈ 2025ರ ವರೆಗೆ ಕೂಡಾ ಖರ್ಚುವೆಚ್ಚದ ಅಂಕಿ ಅಂಶಗಳನ್ನು ಮಂಡಿಸಿದರು. ಸರ್ಕಾರಿ ಗೋಶಾಲೆಯಲ್ಲಿ ಪ್ರಸ್ತುತ 65 ಜಾನುವಾರುಗಳನ್ನು ನಿರ್ವಹಣೆ ಮಾಡುತ್ತಿದ್ದು 4 ಮೇವಿನ ತಾಕುಗಳನ್ನು ನಿರ್ಮಾಣ ಮಾಡಲಾಗಿದ್ದು, 2024-25 ನೇ ಸಾಲಿಗೆ ಹೆಚ್ಚುವರಿ ದಾಸ್ತಾನು ಕೊಠಡಿ, ಬೋರ್ ವೆಲ್ ಮತ್ತು ನೌಕರರ ವಸತಿ ಗೃಹ ನಿರ್ಮಾಣಕ್ಕೆ ರೂ. 22.00 ಲಕ್ಷಗಳು ನಿಗದಿಯಾಗಿದೆ ಹಾಗೂ ಕರ್ನಾಟಕ ಗೃಹ ಮಂಡಳಿ (KHB)ಗೆ ರಾಜ್ಯದಿಂದ ನಿರ್ಮಾಣ ಸಂಸ್ಥೆಯಾಗಿ ಗುರುತಿಸಲಾಗಿದೆ ಎಂದು ಮಾಹಿತಿ ನೀಡಿದರು.

2024-25ನೇ ಸಾಲಿನಲ್ಲಿ ಕಾಪು ತಾ. ಎಲ್ಲೂರುನಲ್ಲಿ 2 ನೇ ಸರ್ಕಾರಿ ಗೋಶಾಲೆಯನ್ನು ರೂ.50.00 ಲಕ್ಷಗಳ ಅನುದಾನದೊಂದಿಗೆ 3.96 ಎಕ್ರೆ ಜಮೀನಿನಲ್ಲಿ ನಿರ್ಮಿತಿ ಕೇಂದ್ರದಿಂದ ಕಾಮಗಾರಿ ನಡೆಯುತ್ತಿದೆ. ಹೆಚ್ಚುವರಿ ದಾಸ್ತಾನು ಕೊಠಡಿ ನಿರ್ಮಾಣಕ್ಕೆ ರೂ. 17.00 ಲಕ್ಷಗಳು ನಿಗದಿಯಾಗಿದೆ. ಹಾಗು ಕರ್ನಾಟಕ ಗೃಹ ಮಂಡಳಿ (KHB)ಗೆ ರಾಜ್ಯದಿಂದ ನಿರ್ಮಾಣ ಸಂಸ್ಥೆಯಾಗಿ ಗುರುತಿಸಲಾಗಿದೆ ಎಂಬ ಮಾಹಿತಿ ನೀಡಿದರು.

**ಸರ್ಕಾರಿ ಗೋಶಾಲೆಗಳನ್ನು (PPP Model) ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ನಿರ್ವಹಣೆ ಮಾಡುವ ಬಗ್ಗೆ:**

ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನ ಕೆರೆಬೆಟ್ಟು ಗ್ರಾಮದ ಪುಣ್ಯಕೋಟಿ ಸರ್ಕಾರಿ ಗೋಶಾಲೆಯನ್ನು ನಿರ್ವಹಿಸಲು ಗೋವರ್ಧನ ಟ್ರಸ್ಟ್ (ರಿ), ಶ್ರೀ ಪೇಜಾವರ ಅಧೋಕ್ಷಜ ಮಠ, ಉಡುಪಿರವರು MOU(Memorandum of Understanding) ಪ್ರಸ್ತಾವನೆ ಸಲ್ಲಿಸಿದ್ದರು. ದಿನಾಂಕ: 29/02/2024 ರಂದು ಆಯುಕ್ತಾಲಯಕ್ಕೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಈ ಸಂಬಂಧ ಮಾನ್ಯ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಸಂಸದರು, ಉಡುಪಿ-ಚಿಕ್ಕಮಗಳೂರು ಕ್ಷೇತ್ರ ರವರು ದಿನಾಂಕ 21/06/2025 ರಂದು ಆಯುಕ್ತಾಲಯಕ್ಕೆ ಶಿಫಾರಸ್ಸು ಮಾಡಿ ಪತ್ರ ಬರೆದಿರುತ್ತಾರೆ ಎಂಬ ಮಾಹಿತಿ ತಿಳಿಸಿದರು.

- 2025-26 ನೇ ಸಾಲಿನಲ್ಲಿ ಉಡುಪಿ ಜಿಲ್ಲಾ ಪ್ರಾಣಿದಯಾ ಸಂಘದ ವತಿಯಿಂದ ನಡೆಸಿದ ಚಟುವಟಿಕೆಗಳ ಮಾಹಿತಿ ನೀಡಿದರು.
- ವಿಶ್ವ ಪ್ರಾಣಿಜನ್ಯ ದಿನದ ಪ್ರಯುಕ್ತ ಪ್ರಾಣಿಜನ್ಯ ಕಾಯಿಲೆಗಳ ಬಗ್ಗೆ ದಿನಾಂಕ:05-06-2025 ರಂದು ತಾಂತ್ರಿಕ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು. ಜಿಲ್ಲಾ ಆರೋಗ್ಯ ಮತ್ತು ಸರ್ವೇಕ್ಷಣಾ ಇಲಾಖೆಯ ಪ್ರತಿನಿಧಿಗಳು ಮತ್ತು ಜಿಲ್ಲೆಯ ಎಲ್ಲಾ ಪಶುವೈದ್ಯಾಧಿಕಾರಿಗಳು ಭಾಗವಹಿಸಿದ್ದರು.
- ದಿನಾಂಕ:06-06-2025 ರಂದು ವಿಶ್ವ ಪ್ರಾಣಿಜನ್ಯ ದಿನದ ಪ್ರಯುಕ್ತ ನಡೆದ ಉಚಿತ ಹುಚ್ಚುನಾಯಿ ರೋಗ ಲಸಿಕಾ ಕಾರ್ಯಕ್ರಮವನ್ನು ಉಡುಪಿ ಪಶುವೈದ್ಯ ಪಾಲಿಕ್ಲಿನಿಕ್ ಆವರಣದಲ್ಲಿ ಆಯೋಜಿಸಲಾಗಿತ್ತು. ಮೈಸೂರು ವಿಭಾಗದ ಜಂಟಿ ನಿರ್ದೇಶಕರು, ಪಶುಪಾಲನಾ ಇಲಾಖೆ ಮತ್ತು ಪ್ರಾಣಿ ದಯಾ ಸಂಘದ ಉಪಾಧ್ಯಕ್ಷರು ಭಾಗವಹಿಸಿದ್ದರು.
- ರೇಬಿಸ್ ಮತ್ತು ಪ್ರಾಣಿಜನ್ಯ ರೋಗಗಳ ಅರಿವು ಕಾರ್ಯಕ್ರಮ ವನ್ನು ದಿನಾಂಕ: 01.09.2025 ರಿಂದ ದಿನಾಂಕ: 27.09.2025 ರವರೆಗೆ ವಿಶ್ವ ರೇಬಿಸ್ ದಿನದ ಆಚರಣೆ ಅಂಗವಾಗಿ ಉಡುಪಿ ಜಿಲ್ಲೆಯ 150 ಶಾಲಾ ಕಾಲೇಜುಗಳಲ್ಲಿ ಅರಿವು ಕಾರ್ಯಕ್ರಮವನ್ನು ಮಾಡಲು ಜಿಲ್ಲೆಯ ಎಲ್ಲಾ ಪಶುವೈದ್ಯರಿಗೆ ಹಾಗೂ ತಾಂತ್ರಿಕ ಸಿಬ್ಬಂದಿಯವರಿಗೆ ಗುರಿ ನಿಗಧಿಪಡಿಸಲಾಗಿದೆ.
- ದಿನಾಂಕ: 28.09.2025 ರಂದು ವಿಶ್ವ ರೇಬಿಸ್ ದಿನದ ಸಭೆ / ಸಮಾರಂಭಗಳನ್ನು ಆಯೋಜಿಸಲು ಹಾಗೂ ದಿನಾಂಕ: 28.10.2029 ರವರೆಗೆ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿ/ ಜಿಲ್ಲಾ ಪಂಚಾಯತಿ/ ಪುರಸಭೆ/ನಗರ ಸಭೆ ಸಹಯೋಗದೊಂದಿಗೆ ನಾಯಿ ಹಾಗೂ ಬೆಕ್ಕುಗಳಿಗೆ ಲಸಿಕಾ ಅಭಿಯಾನ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುವುದು

ಎಂಬ ಮಾಹಿತಿಯನ್ನು ನೀಡಿದರು.

ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ , ಬೆಂಗಳೂರುರವರಿಂದ ದಿನಾಂಕ: 07.08.2025 ರಂದು ಜಿಲ್ಲಾ ಪ್ರಾಣಿ ದಯಾ ಸಂಘ ಉಡುಪಿರವರ ಬ್ಯಾಂಕ್ ಖಾತೆಗೆ ರೂ 35,000/- ಗಳು ವರ್ಗಾವಣೆ ಮಾಡಲಾಗಿದೆ. ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಪ್ರಾಣಿ ದಯಾ ಸಂಘದ ಚಟುವಟಿಕೆಗಳಿಗೆ ಉಪಯೋಗಿಸಲು ಸಭೆಯ ಅನುಮತಿ ಕೋರಿ ಮಂಡಿಸಲಾಯಿತು. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಸಭಾಧ್ಯಕ್ಷರು ಅನುಮೋದಿಸಿದರು.

2024-25ನೇ ಸಾಲಿನ SPCA ವೆಚ್ಚಗಳನ್ನು ಲೆಕ್ಕ ಪರಿಶೋಧಕರಿಂದ ತಪಾಸಣೆ ಮಾಡಿಸಿದ್ದು, 2025-26ನೇ ಸಾಲಿನ ವೆಚ್ಚಗಳನ್ನು ಪರಿಶೋಧನೆ ಮಾಡಿಸಲು ಮತ್ತು ವೆಚ್ಚವನ್ನು ಸಂಘದಿಂದ ಭರಿಸಲು ಅನುಮತಿ ಕೋರಿದರು. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಸಭಾಧ್ಯಕ್ಷರು ಅನುಮೋದಿಸಿದರು.

ಪ್ರಾಣಿದಯಾ ಸಂಘದ ನವೀಕರಣಕ್ಕೆ ಸಂಘದಿಂದ ವೆಚ್ಚ ಭರಿಸಲು ಮತ್ತು ಸದಸ್ಯರ ನೋಂದಣಿ, ನವೀಕರಣಕ್ಕೆ ಅನುಮತಿ ಕೋರಲಾಯಿತು. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಸಭಾಧ್ಯಕ್ಷರು ಅನುಮೋದಿಸಿದರು.

**ಜಿಲ್ಲಾ ಪಶುಸಂಜೀವಿನಿ ಘಟಕದ 1ನೇ ತ್ರೈಮಾಸಿಕ ಪ್ರಗತಿ ಪರಿಶೀಲನೆ;**

ESVHD ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ 1962 ಪಶು ಸಂಜೀವಿನಿ ಘಟಕ ಉಡುಪಿ ಜಿಲ್ಲೆಯಲ್ಲಿ ಒಟ್ಟು 8 ವಾಹನಗಳು ಕಾರ್ಯನಿರ್ವಹಿಸುತ್ತಿದ್ದು, ಕಾರ್ಕಳ ತಾಲ್ಲೂಕು ವಾಹನವು ಇಂಜಿನ್ ದುರಸ್ಥಿಯಿಂದ ಏಪ್ರಿಲ್ 25 ಮಾಹೆಯಿಂದ ಸೇವೆ ಲಭ್ಯವಿಲ್ಲವೆಂದು, ಈ ಬಗ್ಗೆ ಮಾನ್ಯ ಇಲಾಖಾ ಆಯುಕ್ತರಿಗೆ ಮಾಹಿತಿ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಉಳಿದ 7 ವಾಹನಗಳು ರೈತರ ಮನೆಬಾಗಿಲಿಗೆ ತೆರಳಿ ಉಚಿತವಾಗಿ ಸೇವೆ ನೀಡುತ್ತಿರುವ ಬಗ್ಗೆ ಉಪನಿರ್ದೇಶಕರು ಸಭಾಧ್ಯಕ್ಷರಿಗೆ ವಿವರಿಸಿದರು. ಸಭಾಧ್ಯಕ್ಷರು 2025-26ನೇ ಸಾಲಿನ ಮೊದಲನೇ ತ್ರೈಮಾಸಿಕ ಪ್ರಗತಿ ವರದಿ ಪರಿಶೀಲಿಸಿ, ಸ್ವೀಕರಿಸಿ ಕರೆಗಳ ಹಾಗೂ ನೀಡಿದ ಚಿಕಿತ್ಸಾ ಸಂಖ್ಯೆಯ ಬಗ್ಗೆ ಜಿಲ್ಲಾ ಪಶುಸಂಜೀವಿನಿ ಸಂಯೋಜಕರಿಂದ ಮಾಹಿತಿ ಪಡೆದರು. ಮಾನ್ಯ ಸಭಾಧ್ಯಕ್ಷರು ಉತ್ತಮ ರೀತಿಯಲ್ಲಿ ಸೇವೆಯನ್ನು ಒದಗಿಸಲು ಸೂಚಿಸಿದರು.

ಬೇರಾವುದೇ ವಿಷಯಗಳು ಚರ್ಚೆಗೆ ಇಲ್ಲದೇ ಇದ್ದುದರಿಂದ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

(ಡಾ: ಎಂ.ಸಿ.ರೆಡ್ಡಪ್ಪ)
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಪ್ರಾಣಿದಯಾ ಸಂಘ, ಉಡುಪಿ.
ಹಾಗೂ
ಉಪ ನಿರ್ದೇಶಕರು (ಆಡಳಿತ),
ಪಶು ಪಾಲನಾ ಇಲಾಖೆ, ಉಡುಪಿ.

(ಸ್ವರೂಪ ಟಿ.ಕೆ., ಭಾ.ಆ.ಸೇ.)
ಅಧ್ಯಕ್ಷರು,
ಜಿಲ್ಲಾ ಪ್ರಾಣಿದಯಾ ಸಂಘ, ಉಡುಪಿ
ಹಾಗೂ
ಜಿಲ್ಲಾಧಿಕಾರಿಗಳು,
ಉಡುಪಿ ಜಿಲ್ಲೆ, ಉಡುಪಿ.